

# ನಿರ್ಮಾಪಕನ ಆಸಕ್ತಿಗೆ ತಕ್ಕಂತೆ ಸ್ಕ್ರಿಪ್ಟ್!

**ಗೋವಿಂದೇಗೌಡ**
'ಜೋಡಿ ನಂಬರ್ ಒನ್' ಸ್ಪರ್ಧಿ

◆ **ಕೆಲಸ ಹೇಗೆ ನಡೀತಾ ಇದೆ?**

ಪರ್ವಾಗಿಲ್ಲ. ಒಂದಾದ ಮೇಲೆ ಒಂದರಂತೆ ಕೆಲಸಗಳಂತೂ ಸಿಗ್ತಾ ಇವೆ. ಕಿರುತೆರೆಗಿಂತ ಬೆಳ್ಳಿತೆರೆಯಲ್ಲೇ ಹೆಚ್ಚು ತೊಡಗಿದ್ದೇನೆ. ಇತ್ತೀಚೆಗೆ 'ವೇದಾ' ಚಿತ್ರೀಕರಣ ಮುಗಿದಿದೆ. ಸದ್ಯ ಡಬ್ಬಿಂಗ್ ನಡೀತಾ ಇದೆ. ಯೋಗರಾಜ್ ಭಟ್ ನಿರ್ದೇಶನದ ಕೆ.ಡಿ.ಯಲ್ಲಿಯೂ ನಟಿಸುತ್ತಿದ್ದೇನೆ. ಅದರಲ್ಲಿ ಶಿವರಾಜ್ ಕುಮಾರ್ ನಾಯಕ ನಟರಾಗಿದ್ದಾರೆ. 'ನಾನು ಮತ್ತು ಗುಂಡ' ಕೋಮಲ್ ಅವರ ಜೊತೆ ಒಂದು ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಹೀಗೆ ಸಣ್ಣ ಪುಟ್ಟ ಪಾತ್ರಗಳು ಸಿಕ್ಕರೂ ಬಿಜಿಯಾಗಿದ್ದೇನೆ.

◆ **'ಜೋಡಿ ನಂಬರ್' ಹೇಗಿತ್ತು?**

ಜೋಡಿ ನಂಬರ್ ಸದ್ಯ ಮುಗಿಯಿತು. ಅದು ಹೊಸ ಅನುಭವವನ್ನು ನೀಡಿದೆ. 'ಕಾಮಿಡಿ ಕಿಲಾಡಿಗಳು' ನಟನಾಗಿ ಕೊಟ್ಟ ಸ್ಕ್ರಿಪ್ಟ್‌ಗೆ ಬದ್ಧನಾಗಿ ನಟಿಸಬೇಕಿತ್ತು. ಇದು ರಿಯಲಿಟಿ ಶೋ ಆಗಿದ್ದರಿಂದ. ನಾನು ನನ್ನ ಪತ್ನಿ ಹೇಗಿದ್ದೇವೋ ಹಾಗೆ ಕಾಣಿಸಿಕೊಳ್ಳಬೇಕಿತ್ತು. ಈ ವೇದಿಕೆ ನಮಗೆ ಅವಿಸ್ಮರಣೀಯವಾಗಿದೆ. ಏಕೆಂದರೆ, ನಮ್ಮ ಮಗಳಿಗೆ 'ಸಂಸ್ಕೃತಿ' ಎಂದು ನಾಮಕರಣ ಇಲ್ಲೇ ಮಾಡಿದ್ದೇವೆ. ಇದು ಯಾರೋ ಒಬ್ಬಿಬ್ಬರಿಗೆ ಸಿಗಬಹುದಾದ ಅದೃಷ್ಟ. ನನಗೆ ಸಿಕ್ಕಿದೆ. ನನ್ನ ಮಗಳ ನಾಮಕರಣವನ್ನು ಕನ್ನಡ ನಾಡಿನ ಜನತೆ ನೋಡುವಂತೆ ಆಯಿತು. ಅದಕ್ಕಾಗಿ ಝೀ ಕುಟುಂಬಕ್ಕೂ ಋಣಿ. ಈ ಶೋನಲ್ಲಿ ಬೇರೆ ಬೇರೆ ಕಲಾವಿದರ ದಂಪತಿ ಭಾಗವಹಿಸಿದ್ದರು. ನಾವು ಇಲ್ಲಿ ನಟಿಸದೆ ನಮ್ಮ ನಮ್ಮ ಭಾವನೆ ಮತ್ತು ವರ್ತನೆಯನ್ನು ನೈಜವಾಗಿ ಪ್ರಕಟಿಸಬೇಕಿತ್ತು. ಶೋದಿಂದ ಜನರ ಪ್ರೀತಿ ತುಂಬ ಸಿಕ್ಕಿದೆ. ಅದು ಖುಷಿ ಕೊಡುತ್ತಿತ್ತು. ಕೆಲವರು ಫೋನ್ ಮಾಡಿ ನಿಮ್ಮ ದಾಂಪತ್ಯ ಹೀಗೆ ಖುಷಿಯಾಗಿ ಇರಲಿ ಎಂದು ಆಶೀರ್ವದಿಸಿದ್ದಾರೆ. ಇಲ್ಲಿ ನಟನೆ ಮಾಡುವ ಅಗತ್ಯ ಇರಲಿಲ್ಲ.

◆ **ಕಲಾವಿದ ನಿಮ್ಮಲ್ಲಿ ಇದ್ದಾನೆ ಎನ್ನುವುದು ಹೇಗೆ ಗೊತ್ತಾಯಿತು?**

ಹರಪನಹಳ್ಳಿ ತಾಲ್ಲೂಕಿನ ಕಡಬಗೆರೆ ಎಂಬ ಹಳ್ಳಿಯವನು ನಾನು. ಮೂಲತಃ ಕೃಷಿ ಕುಟುಂಬ ನಮ್ಮದು. ನನ್ನ ಅವ್ವ ನಾಗಮ್ಮ ಜನಪದ ಕಥೆಯನ್ನು ಹೇಳುತ್ತಾರೆ. ಅವರು ನನಗೆ ಹೇಳಿದ ಅನೇಕ ಕಥೆಗಳನ್ನೇ ನಾಟಕಗಳನ್ನಾಗಿ ರೂಪಾಂತರಿಸಿದ್ದೇನೆ. ನಾನು 2004ರಲ್ಲಿ ಬೆಂಗಳೂರಿಗೆ ಕೆಲಸಕ್ಕೆಂದು ಬಂದೆ. ಆದರೆ, ಇಲ್ಲಿ ಕೆಲಸ ಹುಡುಕುವ ಗೋಜಿಗೆ ಹೋಗಲಿಲ್ಲ. ನೇರವಾಗಿ ರಂಗಭೂಮಿ ಕೆಲಸದಲ್ಲಿ ತೊಡಗಿದೆ. ನಿರ್ದೇಶನ, ನಟನೆ, ಸ್ಕ್ರಿಪ್ಟ್ ಹೀಗೆ ರಂಗಭೂಮಿ ಬಯಸುವ ಬೇರೆ ಬೇರೆ ಕೆಲಸದಲ್ಲಿ ತೊಡಗಿದೆ. ಮೊದಲು ಹೆಚ್ಚಾಗಿ ನಿರ್ದೇಶನವನ್ನು ಮಾಡುತ್ತಿದ್ದೆ. ನಟನೆ ಬಗ್ಗೆ ಅಷ್ಟಾಗಿ ಆಸಕ್ತಿ ತೋರಿಸಿರಲಿಲ್ಲ. ಆಗ ನಾನು ನಿರ್ದೇಶಿಸಿದ ಹಾಸ್ಯ ಪ್ರಧಾನ ನಾಟಕಗಳು ಹೆಚ್ಚು ಜನಪ್ರಿಯ ಆಗತೊಡಗಿದವು. ಅದೇ ಕಾಳಜಿಯನ್ನು 'ಕಾಮಿಡಿ ಕಿಲಾಡಿಗಳು' ಶೋನಲ್ಲಿ ತೋರಿಸಿದೆ.

◆ **ನಿಮಗೆ ಟೀವಿ ಸೂಕ್ತ ಆಗಬಹುದು ಅಂತ ಅನ್ನಿಸಿದ್ದು ಯಾವಾಗ?**

ಹಿರಿಯರಿಗೆ ನಾಟಕ ಮಾಡಲು ಎಂದು ಹೋದೆ. ಆರಂಭದಲ್ಲಿ ಹೋಗುವ ಮನಸ್ಸು ನನಗೆ ಇರಲಿಲ್ಲ. ಆ ಸಮಯದಲ್ಲಿ 'ಡ್ರಾಮಾ ಜೂನಿಯರ್' ಯಶಸ್ಸು ಗಳಿಸಿತ್ತು. ಅದರ ಬೆನ್ನಿಗೆ 'ಡ್ರಾಮಾ ಸೀನಿಯರ್' ಎಂಬ ಹೆಸರಿನಲ್ಲಿ ಅದರ ಪ್ರಚಾರ ನಡೆದಿತ್ತು. ನಾಟಕದ ಗುಂಗಿನಲ್ಲಿ ಇದ್ದ ನನಗೂ ಇದು ಗಮನ ಸೆಳೆಯಿತು. ಆಡಿಷನ್‌ಗೆ ಕರೆ ಬಂತು. ಆದರೆ ಆಡಿಷನ್ ಕೊಡುವ ಇಚ್ಛೆ ನನಗೆ ಇರಲಿಲ್ಲ. ಹಾಗಾಗಿ ಹೋಗಲು ನಿರಾಕರಿಸಿದ್ದರಿಂದ, ತಂಡವನ್ನು ಕರೆತರಲು ಹೇಳಿದರು. ಆಗ ನನ್ನ ತಂಡಕ್ಕೆ ಒಂದು ಥೀಮ್ ಕೊಟ್ಟು ನಾಟಕ ತೆಗೆದುಕೊಂಡು ಹೋದೆವು. ನಮ್ಮ ನಾಟಕ ಮುಗಿದ ನಂತರ ವೈಯಕ್ತಿಕವಾಗಿ ಆಡಿಷನ್ ನೀಡಬೇಕು ಎಂದು ಹೇಳಿದರು. ನನ್ನ ಅಭಿನಯ ಕುರಿತು ವಿಮರ್ಶೆ ನೀಡಿದ ರಂಗ ತಜ್ಞರು. ಮೈ ಚಳಿ ಬಿಟ್ಟು ನಾಟಕದ ಒಳಹೊಕ್ಕು ನಟಿಸಲು ಸೂಚಿಸಿದರು. ನಂತರ ನನ್ನನ್ನು ಆಯ್ಕೆ ಮಾಡಿದರು. ಅನಿವಾರ್ಯವಾಗಿ ಆ ಶೋನಲ್ಲಿ ಸೇರಿದೆ. ಅದು ಬೇರೆ ಬೇರೆ ಆಯಾಮಗಳಲ್ಲಿ ನನ್ನನ್ನು ಬೆಳೆಸಿದೆ.

◆ **ಸಿನಿಮಾ ನಿರ್ದೇಶನ ಮಾಡುವುದಾದರೆ...**

ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇಲ್ಲಿಯೂ ನಿರ್ದೇಶನ ಮಾಡಬೇಕು ಎನ್ನುವ ಆಸೆ ಇದೆ. ಅದು ನಿರ್ಮಾಪಕರ ಅಭಿರುಚಿಯ ಮೇಲೆ ನಿರ್ಧಾರ ಆಗುತ್ತದೆ. ನಾನು ನಿರ್ದೇಶನ ಮಾಡಬೇಕು ಅಂದರೆ ಅದರ ಕಥೆಯನ್ನು ನಾನೇ ಮಾಡಬೇಕು ನಿಜ. ಆದರೆ ನಿರ್ಮಾಪಕರ ಬಜೆಟ್ ಮತ್ತು ಆಸಕ್ತಿಯ ಮೇಲೆ ಅದು ನಿರೂಪಣೆ ಆಗುತ್ತದೆ. ಸದ್ಯ ನಟನೆ ನನ್ನ ಮಾಧ್ಯಮ.

■ **ರಾಘವೇಂದ್ರ ಕೆ.**